C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆ:101/2023 C/W 113/2023**

ಪ್ರಾಸಾ.22 ಚಾಸಾ.28

| | |
|---|---|
| ಸಾಕ್ಷಿದಾರರ ಹೆಸರು | ಕಿರಣ್ |
| ತಂದೆಯ ಹೆಸರು | ಪುಟ್ಟಣ್ಣ |
| ವಯಸ್ಸು | 36 ವರ್ಷಗಳು |
| ಉದ್ಯೋಗ | ಖಾಸಗಿ ಕೆಲಸ |
| ವಾಸ | ಕೆ.ಎಂ. ದೊಡ್ಡಿ |

**ಸಾಕ್ಷಿಯನ್ನು ದಿನಾಂಕ: 26.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಕಳೆದ 15 ವರ್ಷಗಳಿಂದ ಕೆ.ಎಂ.ದೊಡ್ಡಿ ಸರ್ಕಲ್ ನಲ್ಲಿ ಮಣಿಪಾಲ್ ಕಂಪ್ಯೂಟರ್ಸ್ ಅಂಗಡಿ ನಡೆಸುತ್ತಿದ್ದೇನೆ. ನಾನು ಡಿಪ್ಲೊಮಾ ಎಲೆಕ್ಟ್ರಿಕಲ್ಸ್ ಮಾಡಿದ್ದೇನೆ. ನನ್ನ ಅಂಗಡಿಯಲ್ಲಿ ಸಿಸಿ ಟಿವಿ, ಲ್ಯಾಪ್ ಟ್ಯಾಪ್, ಕಂಪ್ಯೂಟರ್ ಮಾರಾಟ ಮಾಡುತ್ತೇನೆ. ಅದರೊಂದಿಗೆ ತರಬೇತಿಯನ್ನೂ ಸಹ ನಡೆಸುತ್ತೇನೆ. ನನ್ನ ಅಂಗಡಿಯಲ್ಲಿ ಸೇಲ್ಸ್ ಹಾಗೂ ಸರ್ವಿಸ್ ಕೂಡ ಮಾಡುತ್ತೇನೆ.

2. ಕೆ.ಎಂ.ದೊಡ್ಡಿ ಪೊಲೀಸರು ಯಾವುದಾದರೂ ತಾಂತ್ರಿಕ ಸಹಾಯ ಬೇಕಾದರೆ ನನ್ನ ಸಹಾಯ ಪಡೆಯುತ್ತಾರೆ. ನವೆಂಬರ್ 2022 ರ ಒಂದು ದಿನ ಪೊಲೀಸರು ನನಗೆ ದೊಡ್ಡರಸಿನಕೆರೆ ಯಲ್ಲಿರುವ ಒಂದು ಸೊಸೈಟಿಯ ಹತ್ತಿರ ಒಂದು ಸಿಸಿ ಟಿವಿ ಪುಟೇಜ್ ಡಾಟಾ ತೆಗೆಯಬೇಕೆಂದು ನನ್ನನ್ನು ಕರೆದುಕೊಂಡು ಹೋದರು. ಆಗ ಸುಮಾರು 11 ಗಂಟೆ

ಸಮಯವಾಗಿತ್ತು. ಸದರಿ ಸೊಸೈಟಿ ಪತ್ತಿನ ಸಹಕಾರ ಸಂಘ ಆಗಿದ್ದು ಸೊಸೈಟಿ ತೆರೆದಿತ್ತು ಮತ್ತು ಅದರಲ್ಲಿ ಕೆಲಸ ಮಾಡುತ್ತಿದ್ದ ಒಬ್ಬಳು ಮಹಿಳೆ ಹಾಗೂ ಇತರರು ಇದ್ದರು. ಪೊಲೀಸರು ಸೊಸೈಟಿಯಲ್ಲಿ ಹಾಜರಿದ್ದ ಮಹಿಳೆಯ ಜೊತೆ ಮಾತನಾಡಿ, ಡಿವಿಆರ್ ಚೆಕ್ ಮಾಡಬೇಕೆಂದು ಕೇಳಿದರು. ಆಗ ಸದರಿ ಸಿಇಒ ಮಹಿಳೆ ಡಿವಿಆರ್ ತೋರಿಸಿದ್ದರು. ಡಿವಿಆರ್ ಗೋಡೆಗೆ ಹಾಕಲಾಗಿತ್ತು ಮತ್ತು ಸದರಿ ಡಿವಿಆರ್ ಕೆಳಭಾಗದಲ್ಲಿ ಒಂದು ಮಾನಿಟರ್ ಸಹ ಇತ್ತು. ಪೊಲೀಸರು ಸದರಿ ಡಿವಿಆರ್ ನಲ್ಲಿ ಸ್ಪಷ್ಟವಾದ ದಿನಾಂಕ ಹಾಗೂ ಟೈಮಿಂಗ್ಸ್ ನ ಪುಟೇಜ್ ನ್ನು ಚೆಕ್ ಮಾಡಬೇಕೆಂದು ಹೇಳಿದರು. ಆಗ ನಾನು ಡಿವಿಆರ್ ನಲ್ಲಿ ಪೊಲೀಸರು ಹೇಳಿದಂತಹ ದಿನಾಂಕದ ಪುಟೇಜಸ್ ಪ್ಲೇ ಮಾಡಿದೆ ಮತ್ತು ಸದರಿ ಡಿವಿಆರ್ ಗೆ 5-6 ಕ್ಯಾಮೆರಾಗಳು ಅಳವಡಿಸಿರುವುದು ಕಂಡು ಬಂತು.

3. ಪೊಲೀಸರು ಸದರಿ ಡಿವಿಆರ್ ನಲ್ಲಿ ಸ್ಟೋರ್ ಆಗಿದಂತಹ ದೃಶ್ಯಾವಳಿಗಳನ್ನು ಪರಿಶೀಲಿಸಿ ನಂತರ ಡಿವಿಆರ್ ನ್ನು ತೆಗೆದುಕೊಡಿ ಎಂದು ಹೇಳಿದರು. ಅದರಂತೆ ನಾನು ಸದರಿ ಡಿವಿಆರ್ ನ್ನು ಡಿಸ್ ಕನೆಕ್ಟ್ ಮಾಡಿ ತೆಗೆದು ಪೊಲೀಸರಿಗೆ ನೀಡಿದೆ. ಆಗ ಪೊಲೀಸರು ಅದನ್ನು ಅಮಾನತುಪಡಿಸಿಕೊಂಡು ಮಹಜರ್ ಮಾಡಿ ಪೋಟೋ ತೆಗೆದು ನನ್ನ ಸಹಿ ಪಡೆದರು. ಸದರಿ ಮಹಜರ್ ಈಗ ನೋಡುತ್ತಿದ್ದು ಅದನ್ನು ನಿಪಿ-65 ಎಂದು, ಸಾಕ್ಷಿಯ ಸಹಿಯನ್ನು ನಿಪಿ-65(ಎ) ಎಂದು ಗುರುತಿಸಲಾಯಿತು. ಮತ್ತು ಅದೇ ರೀತಿ ಆ ಸಂದರ್ಭದಲ್ಲಿ ತೆಗೆದಂತಹ 2 ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ-66(1 ಮತ್ತು 2) ಎಂದು ಗುರುತಿಸಲಾಯಿತು.

4. ಸದರಿ ಮಹಜರ್ ಆದ ಸುಮಾರು ಒಂದೂವರೆ ತಿಂಗಳ ನಂತರ ಪೊಲೀಸರು ನನಗೆ ಪೊಲೀಸ್ ಠಾಣೆಗೆ ಬರಲು ಹೇಳಿದರು. ತಾರೀಖು ಮರೆತುಹೋಗಿರುತ್ತದೆ. ಅಂದಾಜು ಜನವರಿ ಅಥವಾ ಡಿಸೆಂಬರ್ ನ ಕೊನೆ ಇರಬಹುದು. ನಾನು ಪೊಲೀಸ್ ಠಾಣೆಗೆ ಮಧ್ಯಾಹ್ನ ಸಮಯಕ್ಕೆ ಹೋಗಿದ್ದೆ. ಆಗ ಪೊಲೀಸರು ಈ ಹಿಂದೆ ಅಮಾನತುಪಡಿಸಿಕೊಂಡಿಂತಹ ಡಿವಿಆರ್ ನಲ್ಲಿರುವಂತಹ ಪುಟೇಜಸ್ ಪೆನ್ ಡ್ರೈವ್ ಗೆ ಡೌನ್ ಲೋಡ್ ಮಾಡಿಕೊಡಿ ಎಂದು ಹೇಳಿದ್ದರು. ಅದರಂತೆ ನಾನು ಸದರಿ ಡಿವಿಆರ್ ನಲ್ಲಿರುವ ಪುಟೇಜಸ್ ಪೊಲೀಸ್ ಠಾಣೆಯಲ್ಲೇ ಇದ್ದಂತಹ ಕಂಪ್ಯೂಟರ್ ಮಾನಿಟರ್ ಗೆ ಕನೆಕ್ಟ್ ಮಾಡಿ ನಂತರ ಡೌನ್ ಲೋಡ್ ಮಾಡಿ 2 ಸ್ಯಾನ್ ಡಿಸ್ಕ ಕಂಪನಿಯ ಪೆನ್ ಡ್ರೈವ್ ಗೆ ಕಾಪಿ ಮಾಡಿ ಪೊಲೀಸರಿಗೆ

ನೀಡಿದೆ. ಆ ಬಗ್ಗೆ ಪೊಲೀಸರು ಮಹಜರ್ ಮಾಡಿ ಅಮಾನತುಪಡಿಸಿಕೊಂಡರು. ಸದರಿ ಮಹಜರ್ ಈಗಾಗಲೇ ನಿಪಿ-63 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-63(ಸಿ) ಎಂದು ಗುರುತಿಸಲಾಯಿತ. ಫುಟೇಜ್ ಡೌನ್ ಲೋಡ್ ಮಾಡಿರುವ ಬಗ್ಗೆ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ 65 ಬಿ ಸರ್ಟಿಫಿಕೇಟ್ ನೋಡುತ್ತಿದ್ದು ಸದರಿಯನ್ನು ನಿಪಿ-67 ಎಂದು, ಸಾಕ್ಷಿಯ ಸಹಿಯನ್ನು ನಿಪಿ-67(ಎ) ಎಂದು ಗುರುತಿಸಲಾಯಿತು. ಪೆನ್ ಡ್ರೈವ್ ಈಗಾಗಲೇ ನಿಪಿ- 64 ಎಂದು ಗುರುತಿಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿತರ ಪರ ಎಚ್.ಡಿ.ಆರ್. ವಕೀಲರಿಂದಃ</u>

ನಾನು ತಾಂತ್ರಿಕ ತರಬೇತಿ ಹೊಂದಿದ್ದೇನೆ ಎಂದು ಪೊಲೀಸರಿಗೆ ಯಾವುದೇ ದಾಖಲೆ ನೀಡಿರುವುದಿಲ್ಲ. ಪೊಲೀಸರು ನನಗೆ ಪೊಲೀಸ್ ಠಾಣೆಗೆ ಕರೆಸಿದ್ದಾಗ ಯಾವುದೇ ಪೂರ್ವ ನೋಟೀಸ್ ನೀಡಿರಲಿಲ್ಲ. ಪ್ರಥಮವಾಗಿ ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ಒಂದು ಡಿವಿಆರ್ ತೋರಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸ್ ಠಾಣೆಗೆ ಒಂದೇ ಬಾರಿ ಹೋಗಿದ್ದೆ. ಪೊಲೀಸರು ಪ್ರಥಮ ಬಾರಿಗೆ ಪೊಲೀಸ್ ಠಾಣೆಗೆ ಹೋಗಿದ್ದಾಗ ನನಗೆ ತೋರಿಸಿದಂತಹ ಡಿವಿಆರ್ ಎಲ್ಲಿಂದ ತೆಗೆದುಕೊಂಡು ಬಂದಿದ್ದಾರೆ ಯಾವಾಗ ತೆಗೆದುಕೊಂಡು ಬಂದಿದ್ದಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ನೀವು ಸೊಸೈಟಿಯಲ್ಲಿ ಡಿವಿಆರ್ ತೆಗೆದುಕೊಟ್ಟಿರಲ್ಲ ಅದೇ ಡಿವಿಆರ್ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ನಾನು ಪೊಲೀಸ್ ಠಾಣೆಗೆ ಪ್ರಥಮ ಬಾರಿಗೆ ಹೋದಾಗ ಅದೇ ದಿನ ಡಿವಿಆರ್ ನೋಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಸೊಸೈಟಿಯಲ್ಲಿ ನೋಡಿದ್ದೇನೆ ಎಂದು ಹೇಳುತ್ತಾರೆ. ಸೊಸೈಟಿಯಲ್ಲಿ ತಾನು ತೆಗೆದು ಪೊಲೀಸರಿಗೆ ಕೊಟ್ಟಿದ್ದೆ ಎನ್ನುವ ಡಿವಿಆರ್ ಯಾವ ಕಂಪನಿಯದ್ದಾಗಿತ್ತು ಎಂದು ನಿಖರವಾಗಿ ಗೊತ್ತಿಲ್ಲ.

2. ಸೊಸೈಟಿಯಲ್ಲಿ ಡಿವಿಆರ್ ನೋಡಿದಾಗ ಅದು ಚಾಲ್ತಿಯಲ್ಲಿತ್ತು. ಮಹಜರ್ ನಲ್ಲಿ ಸದರಿ ಡಿವಿಆರ್ ಚಾಲ್ತಿಯಲ್ಲಿತ್ತು ಎನ್ನುವ ಬಗ್ಗೆ ಕಂಡುಬರುವುದಿಲ್ಲ ಎಂದರೆ ಸರಿ. ಪೊಲೀಸರು ಡಿವಿಆರ್ ಅಮಾನತುಪಡಿಸಿಕೊಂಡಿದ್ದೇವೆ ಎನ್ನುವ ಬಗ್ಗೆ ಸೊಸೈಟಿಯಲ್ಲಿದ್ದಂತಹ ಸಿಇಒ ಹಾಗೂ ಇತರರ ಬಳಿ ಯಾವುದೇ ದಾಖಲೆ ಪಡೆದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿಪಿ-66 ಫೋಟೋಗಳು ಪೆನ್ ಡ್ರೈವ್ ನಲ್ಲಿ ಫುಟೇಜ್ ಡೌನ್ ಲೋಡ್ ಮಾಡಿದ್ದೆ ಎಂದು ಹೇಳುತ್ತಿರುವ ದಿನಾಂಕದ ನಂತರ

ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಡಿವಿಆರ್ ನ್ನು ತೆಗೆದು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೊಸೈಟಿಯಲ್ಲಿ ಡಿವಿಆರ್ ತೆಗೆದುಕೊಟ್ಟ ಎಂದು ಹೇಳುವ ದಿನಾಂಕದಂದು ಯಾವುದೇ 65 ಬಿ ಸರ್ಟಿಫಿಕೇಟ್ ನೀಡಿಲ್ಲ. ನಾನು ಡಿವಿಆರ್ ತೆಗೆದುಕೊಂಡಾಗ ಪೊಲೀಸರು ಸೀಲ್ ಮಾಡಿಕೊಂಡಾರೋ ಇಲ್ಲವೋ ಗೊತ್ತಿಲ್ಲ.

**3.** ಸದರಿ ಮಹಜರ್(ನಿಪಿ-**65**) ಆದ ಒಂದೂವರೆ ತಿಂಗಳ ನಂತರ ನಾನು ಪೊಲೀಸ್ ಠಾಣೆಗೆ ಹೋದಾಗ ಮೊದಲನೆಯ ಬಾರಿ ಡಿವಿಆರ್ ನೋಡಿದೆ, ಅದು ತೆರೆದು ನೀಡಿದರು. ಅದಕ್ಕೆ ಸೀಲ್ ಇತ್ತೋ ಇಲ್ಲವೋ ಗೊತ್ತಿಲ್ಲ. ಒಂದೂವರೆ ತಿಂಗಳ ನಂತರ ಡಿವಿಆರ್ ನಿಂದ ಪುಟೇಜಸ್ ಪೆನ್ ಡ್ರೈವ್ ಗೆ ಡೌನ್ ಲೋಡ್ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿಲ್ಲ ಅಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಹಜರ್ ನಲ್ಲಿ ಬರೆದಿರುವ ವಿಚಾರ ನಿಮಗೆ ಗೊತ್ತಿಲ್ಲ ಎನ್ನುವ ಸೂಚನೆಗೆ ಸಾಕ್ಷಿ ಪುಟೇಜ್ ಡೌನ್ ಲೋಡ್ ಮಾಡಿರುವ ವಿಚಾರ ಬರೆದಿರುತ್ತಾರೆ ಎನ್ನುತ್ತಾರೆ.

**4.** ನಾನು ನೀಡಿದಂತಹ ನಿಪಿ-**67** (**65** ಬಿ) ಸರ್ಟಿಫಿಕೇಟ್ ನಲ್ಲಿ ಯಾವ ಡಿವಿಡಿಯಿಂದ ಹಾಗೂ ಯಾವ ಕಂಪ್ಯೂಟರ್ ನಲ್ಲಿ ಡೌನ್ ಲೋಡ್ ಮಾಡಿ ಪೆನ್ ಡ್ರೈವ್ ಗೆ ಕಾಪಿ ಮಾಡಿದ್ದೇನೆ ಎನ್ನುವ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ನಾನು ಪೊಲೀಸ್ ಠಾಣೆಯ ಖಾಯಂ ಸಾಕ್ಷಿ ಆಗಿದ್ದ ಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.